ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಪ್ರಶ್ನೆಯನ್ನು ಫ್ರೇಮ್ ಮಾಡುವ ಸಂದರ್ಭದಲ್ಲಿ ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀರಾಮರೆಡ್ಡಿಯವರು...

ಅಧ್ಯಕ್ಷರು :– ಸೋಮವಾರ ಉತ್ತರ ಕೊಡುತ್ತಾರೆ. ಅವರು ನೀಡುವ ಉತ್ತರ ತೃಪ್ತಿಯಾಗದಿದ್ದರೆ, ಬೇಕಾದರೆ...

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಈಗ ಅವರು ಕೇಳಿರುವ ಪ್ರಶ್ನೆಗಳು ನನ್ನ ಇಲಾಖೆಗೆ ನೇರವಾಗಿ ಸಂಬಂಧಪಡದಿದ್ದರೂ ಪರೋಕ್ಷವಾಗಿ ಕೈಗಾರಿಕಾ ಇಲಾಖೆಗೆ ಸಂಬಂಧಪಡುವುದು ನಿಜ 'ಇದ್ದಲ್ಲಿ ಈ ಕೈಗಾರಿಕೆಗಳು ಪುನರ್ ಪ್ರಾರಂಭಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?' ಎಂದು ಕೇಳಿರುವುದಕ್ಕೆ ಪುನರ್ ಪ್ರಾರಂಭಿಸುವುದಕ್ಕೆ ಪ್ರತಿ ಕೈಗಾರಿಕೆಗೂ ಏನು ಮಾಡಬೇಕು? ಪ್ರತಿ ಕಾರ್ಖಾನೆ ಬಗೆಯೂ ನಾನು ತಮಗೆ ಉತ್ತರ ಕೊಡಬೇಕಾಗುತ್ತದೆ. ಆದುದರಿಂದ, ನಾನು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ನೀಡಿರುವ ಸಲಹೆಯನ್ನು ಒಪ್ಪಿಕೊಳ್ಳುತ್ತೇನೆ. ಈ ಕೈಗಾರಿಕೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕರೆಲ್ಲರೂ ಬೀದಿಪಾಲಾಗಿರುವುದು ಮತ್ತು ಈ public sector & private sector concept ಬಗ್ಗೆ ಮಾನ್ಯ ಗೌರವಾನ್ವಿತ ಸದಸ್ಯರುಗಳ ಅನುಭವದಿಂದ ನಾವೇನು ತಿದ್ದಿಕೊಳ್ಳಬೇಕು ಮತ್ತು ಸರ್ಕಾರಕ್ಕೆ ಈ ನಿಟ್ಟಿನಲ್ಲಿ ಸಲಹೆ ಕೊಡುವ ದಿಸೆಯಲ್ಲಿ ತಾವು ಚರ್ಚೆಗೆ ಅವಕಾಶವಾಗುವಂತೆ ಅರ್ಧ ಗಂಟೆ ಕಾಲ ಚರ್ಚೆಗೆ ಮೀಸಲಿಟ್ಟರೆ ಸರ್ಕಾರಕ್ಕೆ ಇದರಿಂದ ಅನುಕೂಲವಾಗುತ್ತದೆ.

ಅಧ್ಯಕ್ಷರು :– ಇದರ ಬಗ್ಗೆ ಒಂದು ನೋಟಿಸ್ ಕಳುಹಿಸಿ.

ಡಾ॥ ಕೆ.ಅನ್ನದಾನಿ
(ಗೈರು ಹಾಜರು)

ಶ್ರೀ ಐವಾನ್ ನಿಗ್ಲಿ
(ಗೈರು ಹಾಜರು)

<u>ಸುಳ್ಯ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ : ಪಂಗಡಗಳ ಕುಟುಂಬಗಳಿಗೆ ನೀಡಿರುವ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದು :</u>

284 (3281) ಶ್ರೀ ಅಂಗಾರ್ ಎಸ್. (ಸುಳ್ಯ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಳ ತಾಲ್ಲೂಕಿನ ಅಜ್ಜಾವರ ಗ್ರಾಮದ ದೊಡ್ಡೇರಿಯಲ್ಲಿ ಪರಿಶಿಷ್ಟ ಜಾತಿ : ಪಂಗಡಗಳ ಕುಟುಂಬಗಳಿಗೆ ಒದಗಿಸಲಾದ ಭೂಮಿಗೆ ಕೃಷಿ ಮಾಡಲು ನೀರಾವರಿ ಸೌಲಭ್ಯ ಯಾವಾಗ ಮಂಜೂರು ಮಾಡಲಾಗುವುದು;

ಆ) ಈ ಸೌಲಭ್ಯವನ್ನು ಎಷ್ಟು ಜನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ನೀಡಲಾಗುವುದು (ಫಲಾನುಭವಿಗಳ ಪೂರ್ತಿ ವಿವರ ನೀಡಿ)?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸಣ್ಣ ನೀರಾವರಿ ಇಲಾಖೆಯಿಂದ ಅಜ್ಜಾವರ ಗ್ರಾಮದ ದೊಡ್ಡೇರಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕುಟುಂಬಗಳಿಗೆ ಒದಗಿಸಲಾದ ಕೃಷಿ ಭೂಮಿಗೆ ಪಯಸ್ವಿನಿ ನದಿಯಿಂದ ಏತ ನೀರಾವರಿ ಯೋಜನೆಗಳ ಮೂಲಕ ನೀರು ಒದಗಿಸಲಾಗಿದ್ದು ಇದನ್ನು ಹೊರತು ಪಡಿಸಿ ಹೊಸ ನೀರಾವರಿ ಸೌಲಭ್ಯವನ್ನು ಒದಗಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಶ್ರೀ ಎಸ್. ಅಂಗಾರ :– ಮಾನ್ಯ ಸಭಾಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಆದರೆ, ನೀರಾವರಿ ಸೌಲಭ್ಯವನ್ನು ಯಾವಾಗ ಒದಗಿಸಿಕೊಡಲಾಗಿದೆ? ಎಷ್ಟು ಕುಟುಂಬಗಳು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುತ್ತಿವೆ? ಮತ್ತು ಎಷ್ಟು ಎಕರೆ ಕೃಷಿ ಭೂಮಿಯನ್ನು ಅಭಿವೃದ್ಧಿಪಡಿಸಲಾಗಿದೆ ಎಂಬುದಕ್ಕೆ ವಿವರಣೆ ನೀಡಬೇಕೆಂದು ಮಾನ್ಯ ಸಚಿವರನ್ನು ತಮ್ಮ ಮೂಲಕ ಕೇಳುತ್ತಿದ್ದೇನೆ.

ಡಾ॥ ವೈ. ನಾಗಪ್ಪ :– ಮಾನ್ಯ ಅಧ್ಯಕ್ಷರೇ ಮೂಲತಃ ಈ ಪ್ರಶ್ನೆ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟಿದೆ. ಆದರೂ ಅವರು ಕೇಳಿರುವ ಪ್ರಶ್ನೆಗೆ ನಾನು ಉತ್ತರಿಸಿದ್ದೇನೆ. ಸುಳ್ಯ ತಾಲ್ಲೂಕಿನ ಅಜ್ಜಾವರ ಗ್ರಾಮದ ದೊಡ್ಡೇರಿಯಲ್ಲಿ ಪಯಸ್ವಿನಿ ನದಿಯ ಮೇಲಿನ ಪ್ರವಾಹ ಮತ್ತು ಕೆಳ ಪ್ರವಾಹವೆಂದು ಎರಡು ರೀತಿ ಇದೆ. ಈ ಎರಡೂ ಪ್ರವಾಹಗಳಿಂದ ಎರಡು ಏತ ನೀರಾವರಿ ಯೋಜನೆಗಳನ್ನು 1966ರಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. ನೀರಾವರಿ ಇಲಾಖೆಯಿಂದ ಒಟ್ಟು 41 ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಟುಂಬಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಿಕೊಡಲಾಗಿದೆ. ಸದರಿ ಏತ ನೀರಾವರಿ ಯೋಜನೆಯಲ್ಲಿ 20 ಅಶ್ವಶಕ್ತಿಯ ಎರಡು ಪಂಪುಸೆಟ್ಟುಗಳನ್ನು ಅಳವಡಿಸಲಾಗಿದೆ. ಈ ಏತ ನೀರಾವರಿ ಯೋಜನೆ ಮೂಲಕ ಇದುವರೆಗೂ ಕೆಲವು ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.

ಸುಮಾರು ಎಂಟು ಲಕ್ಷ ರೂಪಾಯಿಗಳ ಅನುದಾನದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಿಸಿದ ಇಂಜಿನಿಯರ್ ಅವರಿಗೆ ಪತ್ರ ಬರೆಯುವ ಮೂಲಕ ದುರಸ್ತಿ ಕಾರ್ಯ ಕೈಗೆತ್ತಿಕೊಂಡಿದ್ದು ಈಗ ದುರಸ್ತಿ ಹಂತದಲ್ಲಿದೆ. ಜೊತೆಗೆ, ಏತ ನೀರಾವರಿ ಯೋಜನೆ ಚಾಲನೆಯಾಗುತ್ತಿದೆ. ಇದು ನನ್ನ ಇಲಾಖೆಗೆ ಸಂಬಂಧಪಟ್ಟಿರುವ ಪ್ರಶ್ನೆಯಲ್ಲ.

ಶ್ರೀ ಎಸ್. ಅಂಗಾರ :– ಈ ಪ್ರಶ್ನೆಯನ್ನು ನಾನು ಸಣ್ಣ ನೀರಾವರಿ ಇಲಾಖೆ ಸಚಿವರಿಗೆ ಕೇಳಿದ್ದು. ಆದರೆ, ಪ್ರಶ್ನೆ ಸಮಾಜ ಕಲ್ಯಾಣ ಇಲಾಖೆಗೆ ಹೋಗಿದೆ.

ಅಧ್ಯಕ್ಷರು: ತಪ್ಪಾಗಿ ಹೋಗಿದೆ.

ಶ್ರೀ ಎಸ್. ಅಂಗಾರ :– 1966ರಲ್ಲೇ ಈ ಏತ ನೀರಾವರಿ ಯೋಜನೆಯನ್ನು ಪ್ರಾರಂಭಿಸಲಾಗಿದೆಯೆಂದು ಹೇಳಿದ್ದಾರೆ. ಅಂದು ಪ್ರಾರಂಭಗೊಂಡಿರುವ ಈ ಏತ ನೀರಾವರಿ ಯೋಜನೆಯಲ್ಲಿ ಅಳವಡಿಸಲಾಗಿದ್ದ ಹಳೆಯ ಮೋಟಾರು ಈಗ ಕಾರ್ಯ ನಿರ್ವಹಿಸುತ್ತಿದ್ದು, ಅದು ಆಗಿಂದಾಗ್ಗೆ ಸುಟ್ಟುಹೋಗುತ್ತಿರುವುದರಿಂದ ಪ್ರತಿ ವರ್ಷವೂ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕುಟುಂಬದವರಿಗೆ ಲಕ್ಷಗಟ್ಟಲೆ ನಷ್ಟವಾಗುತ್ತಿದೆ. ಮಾನ್ಯ ಸಚಿವರು ತಿಳಿಸಿರುವ ಪ್ರಕಾರ 44 ಕುಟುಂಬಗಳಲ್ಲಿ, 120 ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕುಟುಂಬಗಳಿವೆ. ಸಣ್ಣ ನೀರಾವರಿ ಇಲಾಖೆಗೆ ಸಂಬಂಧಿಸಿರುವ ಪ್ರಶ್ನೆಯನ್ನು ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸುವ ಮೂಲಕ ಈ ರೀತಿಯ ಉತ್ತರ ಕೊಟ್ಟರೆ ಸರಿಯಾಗುವುದಿಲ್ಲ. ನನಗೆ ಸ್ಪಷ್ಟವಾದ ಉತ್ತರ ಬೇಕಾಗಿದೆ. 1966ರಲ್ಲಿ ಪ್ರಾರಂಭಗೊಂಡಿರುವ ಈ ಏತ ನೀರಾವರಿ ಯೋಜನೆಗೆ ಅಳವಡಿಸಲಾಗಿರುವ ಹಳೆಯ ಮೋಟಾರು ಆಗಿಂದಾಗ್ಗೆ ಕೆಟ್ಟುಹೋಗುತ್ತಿರುವುದರಿಂದ ಅಲ್ಲಿನ ಪರಿಶಿಷ್ಟ ಜಾತಿ, ವರ್ಗದ ಕುಟುಂಬದವರಿಗೆ ತುಂಬಾ ನಷ್ಟವುಂಟಾಗುತ್ತಿದೆ. ಹಳೆಯ ಮೋಟಾರಿನ ಬದಲು ಹೊಸ ಮೋಟಾರನ್ನು ಅಳವಡಿಸುವ ಮೂಲಕ ನೀರಿನ ಸೌಲಭ್ಯವನ್ನು ಸರಿಯಾಗಿ ಒದಗಿಸಿಕೊಡುತ್ತೀರಾ? ಇದಕ್ಕೆ ತಾವು ಸ್ಪಷ್ಟವಾಗಿ ಉತ್ತರಿಸಬೇಕು.

ಅಧ್ಯಕ್ಷರು :– ಡಾ॥ ನಾಗಪ್ಪನವರೆ, ಈ ವಿಷಯ ಕುರಿತಂತೆ ತಮ್ಮಲ್ಲಿ ಪೂರ್ಣ ಮಾಹಿತಿ ಇಲ್ಲದಿದ್ದರೆ, ಸಣ್ಣ ನೀರಾವರಿ ಇಲಾಖೆಯಿಂದ ಒದಗಿಸಿಕೊಡಿ.

ಡಾ॥ ನಾಗಪ್ಪ :– ಇದು ನಮ್ಮ ಇಲಾಖೆಗೆ ಸಂಬಂಧಪಡದಿದ್ದರೂ ನಾನು ಉತ್ತರಿಸುತ್ತಿದ್ದೇನೆ. ಇದು ಸಣ್ಣ ನೀರಾವರಿ ಇಲಾಖೆಗೆ ಸಂಬಂಧ ಪಟ್ಟಿದೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷರೆ, ಅವರಿಗೆ ಬರೀ ಉತ್ತರ ಬೇಡ. ಬರೀ ಉತ್ತರ ತೆಗೆದುಕೊಂಡು ಏನು ಮಾಡುವುದು? ಏನು ಪರಿಹಾರವೆಂತಲೂ ಹೇಳಿಲ್ಲ. ಆ ಪ್ರಶ್ನೆಯನ್ನು ತಾವು ಸಣ್ಣ ನೀರಾವರಿ ಇಲಾಖೆಗೆ ಕಳುಹಿಸಿಕೊಡಿ.

ಅಧ್ಯಕ್ಷರು :– ತಮ್ಮಲ್ಲಿ ಆ ಕುರಿತಂತೆ ಪೂರ್ಣ ಮಾಹಿತಿ ಇಲ್ಲದಿದ್ದರೆ, ಸಣ್ಣ ನೀರಾವರಿ ಇಲಾಖೆಯಿಂದ ಮಾಹಿತಿ ತರಿಸಿಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ :– ಸಣ್ಣ ನೀರಾವರಿ ಇಲಾಖೆಯಿಂದ ಪರಿಹಾರ ಕೊಡಿಸುವಂತೆ ವ್ಯವಸ್ಥೆ ಮಾಡಿ., ಸುಮ್ಮನೆ ಉತ್ತರ ತೆಗೆದುಕೊಂಡು ಏನು ಮಾಡೋಣ?

ಡಾ॥ ವೈ. ನಾಗಪ್ಪ :– ನಾನು ಉತ್ತರ ಹೇಳುತ್ತಿದ್ದೇನೆ. ಸನ್ಮಾನ್ಯ ಸದಸ್ಯರಾದ ಆಂಜನೇಯರವರು ದಯಮಾಡಿ ಕುಳಿತುಕೊಳ್ಳಬೇಕು. I have not yielded. ಆಗಿಂದಾಗ್ಗೆ ದುರಸ್ತಿಯಿಂದಾಗಿ ಪಂಪುಗಳನ್ನು ಬದಲಾಯಿಸಿ ಮತ್ತು ಹೊಸ ಪಂಪು ಮತ್ತು ಮೋಟಾರನ್ನು ಅಳವಡಿಸಲು ಒಟ್ಟು ಎಂಟು ಲಕ್ಷ ರೂಪಾಯಿಗಳು ಬೇಕಾಗಿದ್ದು, ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲು ಸಣ್ಣ ನೀರಾವರಿ ಇಲಾಖೆಯು ಕ್ರಮ ಕೈಗೊಂಡಿರುತ್ತದೆ. ಈ ವಿಷಯ ನಮ್ಮ ಇಲಾಖೆಗೆ ವರ್ಗವಾಗಿರುವ ಕುರಿತು ಯಾವುದೇ ಸರ್ಕಾರಿ ಆದೇಶವಿಲ್ಲ ಯಾವ ಪತ್ರವೂ ಸಹ ಬಂದಿಲ್ಲ. ನಾನು ತಮಗೇಕೆ ಉತ್ತರ ಕೊಡಲಿ?

ಶ್ರೀ ಹೆಚ್. ಆಂಜನೇಯ(ಭರಮಸಾಗರ) :– ಮಾನ್ಯ ಅಧ್ಯಕ್ಷರೆ, ಇದು ಪರಿಶಿಷ್ಟ ಜಾತಿ ಮತ್ತು ಫಲಾನುಭವಿಗಳಿಗೆ ಸಂಬಂಧಿಸಿರುವ ವಿಷಯವಾಗಿರುವುದರಿಂದ ಮಾನ್ಯ ಸಮಾಜ ಕಲ್ಯಾಣ ಸಚಿವರು ಸಂಬಂಧಪಟ್ಟ ನೀರಾವರಿ ಖಾತೆಯ ಸಚಿವರನ್ನು ಕರೆದು ಮತ್ತು ಮಾನ್ಯ ಶಾಸಕರುಗಳನ್ನು ಕರೆದು ಸಭೆ ನಡೆಸುವ ಮೂಲಕ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕು. ಇದು ನನಗೆ ಸಂಬಂಧವಿಲ್ಲವೆಂದು ಹಾಗೇ ಬಿಟ್ಟುಬಿಡುವುದಕ್ಕಾಗುವುದಿಲ್ಲ. ಏಕೆಂದರೆ, ಅವರು ಪರಿಶಿಷ್ಟ ಜಾತಿ ಮತ್ತು ವರ್ಗಗಳ ಫಲಾನುಭವಿಗಳಾಗಿದ್ದು ಕಷ್ಟದಲ್ಲಿದ್ದಾರೆ, ನಷ್ಟದಲ್ಲಿದ್ದಾರೆ. ಹಳೆಯ ಪಂಪುಸೆಟ್ಟುಗಳನ್ನು ಅಳವಡಿಸಲಾಗಿದೆ ಎಂದು ಮಾನ್ಯ ಸದಸ್ಯರು ಗಂಭೀರವಾದ ಆಪಾದನೆ ಮಾಡುತ್ತಿದ್ದಾರೆ. ಈ ದಿಸೆಯಲ್ಲಿ ಇದು ನನ್ನ ಇಲಾಖೆಗೆ ಸಂಬಂಧಪಡುವುದಿಲ್ಲವೆಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ಹೇಳುತ್ತಿರುವುದು ಸರಿಯಲ್ಲ. ಈ ವಿಷಯ ನಿಮ್ಮ ಇಲಾಖೆಯೂ ಒಳಗೊಂಡಂತೆ ಬೇರೆ ಬೇರೆ ಇಲಾಖಾ ಸಚಿವರುಗಳಿಗೆ ಹೋಗಿದ್ದರೆ, ಅವರುಗಳನ್ನು ಕರೆಸಿ ಸರಿಯಾದ ಮಾರ್ಗದರ್ಶನ ಮಾಡಿ ಪರಿಶಿಷ್ಟರಿಗೆ ರಕ್ಷಣೆ ಒದಗಿಸಿ, ಅವರ ಬೆಳವಣಿಗೆಗೆ ಇಲಾಖೆಯು ಶ್ರಮಿಸುವುದು ನಿಮ್ಮ ಕರ್ತವ್ಯ. ಈ ಬಗ್ಗೆ ಮಾನ್ಯ ಸದಸ್ಯರಾದ ಅಂಗಾರ ಮತ್ತು ನಮ್ಮನ್ನು ಕರೆದು ಮಾತನಾಡುವ ವ್ಯವಸ್ಥೆ ಮಾಡಬೇಕು.

ಡಾ॥ ವೈ. ನಾಗಪ್ಪ :– ನಾನು ಅದನ್ನು ಮಾಡುತ್ತೇನೆ. ಮೂಲತಃ ಇದು ನಮ್ಮ ಇಲಾಖೆಗೆ ಸೇರಿಲ್ಲ. ನಾವು ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿಲ್ಲ.

ಅಧ್ಯಕ್ಷರು : ಅವರನ್ನು ಕರೆಸಿ ಮಾತನಾಡಿ.